
ಅದು ಅಧ್ವಾನವನ್ನೇ ಸೃಷ್ಟಿಸಿಬಿಡುತ್ತದೆ. ನಮ್ಮ ಊರಿನಲ್ಲೊಬ್ಬರು ಈ ಫ್ಯಾಷನ್ ಮೋಹಕ್ಕೆ ಬಿದ್ದು ಮಗುವಿಗೆ ಸಜಾ ಎಂದು ಹೆಸರಿಟ್ಟಿದ್ದರು! ಅವರ ಅಂದರೆ ಆ ಮಗುವಿನ ಅಪ್ಪಅಮ್ಮನ ಹೆಸರು ಸಮೀರ್ ಮತ್ತು ಜಾನಕಿ. ಆ ಮುದ್ದಾದ ಮಗು ಅವರಿಗೆ ಸಜಾ(ಶಿಕ್ಷೆ)ದಂತೆ ಕಂಡಿರಬಹುದೇ? ಮುಂದೆ ಆ ಮಗು ಬೆಳೆದ ಮೇಲೆ ಯಾರೋ ಒಬ್ಬರು ನೋಟರಿ ಮುಂದೆ ತನ್ನ ಹೆಸರನ್ನು ತನಗೆ ಬೇಕಾದಂತೆ ಬದಲಿಸಿಕೊಳ್ಳಬಹುದೇನೋ? ಹೆಸರು ಬದಲಾವಣೆ ಎಂದೊಡನೆ ನನಗೆ ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಒಬ್ಬರು ಹೆಸರು ಬದಲಾಯಿಸಿದ ಪ್ರಕಟಣೆ ನೆನಪಾಯಿತು. ಅವರು ತಮ್ಮ ಮೊದಲಿನ ಹೆಸರಿಗೆ ಬದಲಾಗಿ ಮಾನವಸೃಷ್ಟಿ ಎಂದು ಹೆಸರು ಬದಲಿಸಿಕೊಂಡಿದ್ದರು! ಆದರೂ ಹೆಸರು ಒಂಥರಾ ಆಕರ್ಷಕವಾಗಿದೆ ಬಿಡಿ.



ಕೆಲವರ ನಾಮ ಉದ್ದವಾಗಿದ್ದರೆ ಅದನ್ನು ಅರ್ಧ ಅಳಿಸಿ ಗಿಡ್ಡ ಮಾಡುವುದು ಹಲವರ ಅಭ್ಯಾಸ. ಗೋದಾವರಿ ಎಂಬ ಹೆಸರನ್ನು ಗೋದಿ ಎಂದೂ, ಮಂದಿರಾ ಎಂಬ ಸುಂದರ ಹೆಸರು ಮಂದಿ ಆಗಿಯೂ, ಸುದೀಪ್ ಹೆಸರು ಸುದ್ದಿಯಾಗಿಯೂ, ಮಂಗಳಾ ಎಂಬ ಶುಭಕರ ಹೆಸರು ಮಂಗಿಯಾಗಿಯೂ ಸಣ್ಣಗಾಗುತ್ತವೆ. ಮೂಲ ಹೆಸರಿನ ಚಂದವನ್ನು ಕಳೆದುಕೊಂಡು ಕುರೂಪಗೊಳ್ಳುತ್ತವೆ. ಇನ್ನು ಕೃಷ್ಣ ಎಂಬ ಹೆಸರು ಕಿಟ್ಟ/ಕಿಟ್ಟಿ ಎಂದೂ, ಸುಬ್ರಹ್ಮಣ್ಯ ಎಂಬ ಹೆಸರು ಸುಬ್ಬ/ಸುಬ್ಬಣ್ಣ ಎಂದೂ, ಗೋಪಾಲ ಎಂಬುದು ಗೋಪಿಯಾಗಿಯೂ, ದಮಯಂತಿ ದಮ್ಮು ಆಗಿಯೂ, ಜಾನಕಿ ಜಾನಿಯಾಗಿಯೂ, ಶ್ರೀನಾಥ ಶೀನನಾಗಿ, ವೆಂಕಟೇಶ ವೆಂಕಿಯಾಗಿ, ಬಾಲಕೃಷ್ಣ ಬಾಲು ಎಂದು ಸಣ್ಣಗಾಗುವುದು ಮಾಮೂಲೇ ಬಿಡಿ. ನಮ್ಮನೆ ಕೆಲಸದವಳ ಹತ್ತಿರ ಅವಳ ಗಂಡನ ಹೆಸರೇನೆಂದು ಕೇಳಿದೆ. 'ಪತಿ' ಎಂದಳು. ಅಲ್ಲ, ಪತಿ ಎಂದರೇನೇ ಗಂಡ ಎಂದು. ಗಂಡನಿಗೆ ಗಂಡ ಎಂದು ಹೆಸರಿರುತ್ತದೆಯೇ? ಮತ್ತೆ ಕೇಳಿದೆ. ಆಗವಳು ಅಂದಿದ್ದು – ಗಂಡನ ಹೆಸರು ವೆಂಕಟಾಚಲಪತಿ. ಎಲ್ಲರೂ ಕರೆಯುವುದು ಮಾತ್ರ ಪತಿ ಎಂದು!

ಇನ್ನು ಹಲವರಿರುತ್ತಾರೆ, ಅವರಿಗೆ ಹೆಸರಿನ ಅರ್ಥವೂ ಗೊತ್ತಿರುವುದಿಲ್ಲ, ತಿಳಿದುಕೊಳ್ಳುವ ಗೋಜಿಗೂ ಹೋಗುವುದಿಲ್ಲ. ಜೊತೆಗೆ ಅವರ ನಾಲಗೆಯೂ ತಿರುಗುವುದಿಲ್ಲ. ಅಂಥಹವರ ಬಾಯಲ್ಲಿ ಅರ್ಥಪೂರ್ಣ ನಾಮಗಳು ನಾಮಾವಶೇಷ ಆಗುವುದೊಂದು ಬಾಕಿ. ಅವರ ಬಾಯಲ್ಲಿ ಶ್ರದ್ಧಾ ಎಂಬ ಹೆಸರು ಶ್ರಾದ್ಧವಾಗಿಯೂ, ಪ್ರಬೋಧ ಎಂಬುದು ಪ್ರಾರಬ್ಧವಾಗಿಯೂ ವಿಕಾರಗೊಳ್ಳುತ್ತವೆ. ಅದನ್ನು ಕೇಳುವವರು ಎರಡೂ ಕಿವಿಗಳನ್ನು ಮುಚ್ಚಿಕೊಳ್ಳಬೇಕು, ಆ ಹೆಸರಿನವರು ತಮಗೆ ಆ ಹೆಸರು ಯಾಕಾದರೂ ಇಟ್ಟರೋ ಎಂದು ಚಿಂತಿಸುವಂತಾಗಬೇಕು, ಆ ರೀತಿ ಅಂತಹ ಒಳ್ಳೆಯ ನಾಮಗಳನ್ನು ತಮಗೆ ತೋರಿದಂತೆ ತಿದ್ದಿ ವಕ್ರವಾಗಿಸುತ್ತಾರೆ. ಅಂತಹದುರಲ್ಲಿ ನಮ್ಮ ಅನಕ್ಷರಸ್ಥೆ ದೊಡ್ಡಮ್ಮ ಫಣಿಯಮ್ಮನೇ ವಾಸಿ. ನನ್ನ ಅಣ್ಣನ ಹೆಸರು ಅವಿನಾಶ ಎಂದಿದ್ದರೂ ಅವರು ಅದನ್ನು ಪೂರ್ತಿಯಾಗಿ ಹೇಳಲು ನಮಗೆ ಬಿಡುತ್ತಲೇ ಇರಲಿಲ್ಲ. 'ಅವಿ ಅಂತ ಕರೀರೇ ಸಾಕು. ನಾಶಾ ಅಂತ ಯಾಕೆ ಕರೀತೀರೋ, ಪಾಪ. ನಾಶ ಅಂತ ಹೇಳಕ್ಕಾಗ್ದು ಕಣ್ರೋ' ಅಂತಿದ್ರು!



ಇನ್ನು ಕೆಲವರ ನಾಮಗಳು ಮೊದಲೇ ಚಿಕ್ಕದಿರುತ್ತವೆ ಅಂದರೆ ಮೊದಲೇ ಎರಡು ಅಥವಾ ಮೂರಕ್ಷರವಿರುತ್ತವೆ. ಅವನ್ನೂ ಕೊಂಬು, ಗುಣಿಸು ಕೊಟ್ಟು ವಿಚಿತ್ರವಾಗಿಸುತ್ತಾರೆ ಜನರು. ಉಮಾ ಎಂಬ ನಾಮ ಉಮಿಯಾಗಿಬಿಡುತ್ತದೆ ಭತ್ತದ ಜೊಳ್ಳಿನ ಹಾಗೆ, ಮೃದು–ಮಧುರತೆಯ ಭಾವನೆಯ ಕಲ್ಪನಾ ಎಂಬುದು ಕಲ್ಲು ಎಂದು ಗಟ್ಟಿಯಾಗಿಬಿಡುತ್ತದೆ, ಆಶಾ ಎಂಬುದನ್ನು ಆಶಿ ಎನ್ನುವಾಗ 'ಆಕ್ಷೀ' ಎಂದಂತಾಗುತ್ತದೆ, ಅರ್ಚಿತಾ ಎಂಬುದನ್ನು ಅರಿ ಎಂದು